ರೂಪಾಯಿಗಳ ಒಂದು ಯೋಜನೆ ಫೈನಾನ್ಸ್ ಡಿಪಾರ್ಟ್‌ಮೆಂಟಿನಲ್ಲಿ ಇದೆ. ಆದ್ದರಿಂದ ಈ ವರ್ಷವೇ ನಾವು ಇನ್ನೂ ಹೆಚ್ಚಿನ ಸಿಬ್ಬಂದಿಯನ್ನು ಕೊಡತಕ್ಕಂಥ ಪ್ರಯತ್ನವನ್ನು ಮಾಡುತ್ತೇವೆ.

5. ದಕ್ಷಿಣ ಕನ್ನಡ ಜಿಲ್ಲೆಯ ಬಡ ಕೃಷಿಕರ ಚಿಮಣಿ ಎಣ್ಣೆ ಪಂಪುಗಳಿಗೆ ಕಡಿಮೆ ದರದಲ್ಲಿ ಚಿಮಣಿ ಎಣ್ಣೆ ಒದಗಿಸುವ ಬಗ್ಗೆ :

ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯ ಸಣ್ಣ ಹಾಗೂ ಮಧ್ಯಮ ವರ್ಗದ ಸಾಗುವಳಿದಾರರಲ್ಲಿ ಹೆಚ್ಚಿನವರು ತೀರಾ ಬಡವರಾಗಿದ್ದು ಭೂ ನ್ಯಾಯಮಂಡಳಿಯಿಂದ ಕೃಷಿ ಭೂಮಿಯನ್ನು ಪಡೆದವರಾಗಿರುತ್ತಾರೆ. ಅವರು ತಮ್ಮ ಎರಡನೇ ಮತ್ತು ಮೂರನೇ ಭತ್ತದ ಬೆಳೆಗೆ ನೀರಾವರಿಗಾಗಿ ಚಿಮಿಣಿ ಎಣ್ಣೆಯ ಸಣ್ಣ ಪಂಪುಗಳನ್ನು ಅವಲಂಬಿಸಿ ಕೃಷಿ ಮಾಡುತ್ತಿದ್ದಾರೆ. ಪ್ರಕೃತ ದ.ಕ. ಜಿಲ್ಲೆಯಲ್ಲಿ ಸ್ವಂತ ಉಪಯೋಗಕ್ಕಾಗಿ ಅಂದರೆ ಮನೆಯ ಉಪಯೋಗಕ್ಕಾಗಿ ಚಿಮಣಿಎಣ್ಣೆಯನ್ನು ಕಡಿಮೆ ಬೆಲೆಯಲ್ಲಿ ಅಂದರೆ ಲೀಟರಿಗೆ 2–60 ರಂತೆ ಪೂರೈಸುತ್ತಿದ್ದು ಸರ್ಕಾರವು ಸಬ್ಸಿಡಿಯನ್ನು ನೀಡುತ್ತಿದೆ. ಆದರೆ ಕೃಷಿಗಾಗಿ ಉಪಯೋಗಿಸಲು ಪರವಾನಿಗೆ ಪಡೆದಿರುವ ಕೃಷಿಕರ ಚಿಮಣಿ ಎಣ್ಣೆಗೆ ಹೆಚ್ಚಿನ ಬೆಲೆಯನ್ನು ನಿಗದಿಪಡಿಸಿದ್ದು ರೂ. 3–80ನ್ನು ಅವರಿಂದ ಪಡೆಯುತ್ತಿರುವುದರಿಂದ ಕೃಷಿಕರಿಗೆ ತುಂಬಾ ತೊಂದರೆಯಾಗಿದ್ದು ಅವರು ನಷ್ಟ ಅನುಭವಿಸುತ್ತಿದ್ದಾರೆ. ಆದರೆ ನೆರೆಯ ರಾಜ್ಯವಾದ ಕೇರಳದಲ್ಲಿ ಈ ವ್ಯವಸ್ಥೆಗೆ ಸರಕಾರವು ಸಬ್ಸಿಡಿ ನೀಡುತ್ತಿದೆ. ಈ ಕುರಿತು ಕಳೆದ ವರ್ಷ ಸರಕಾರದ ಗಮನ ಸೆಳೆದಾಗ ಕೇವಲ 18 ಲಕ್ಷ ರೂಗಳಷ್ಟು ಸಬ್ಸಿಡಿ ನೀಡಿದರೆ ಈ ತೊಂದರೆಯನ್ನು ನಿವಾರಿಸಬಹುದೆಂದು ತಿಳಿದುಬಂದಿರುತ್ತದೆ. ಆದುದರಿಂದ ಮಾನ್ಯ ಮಖ್ಯಮಂತ್ರಿಗಳು ಇದೊಂದು ಅತೀ ಅವಶ್ಯಕವೆಂದು ಪರಿಗಣಿಸಿ ಬಡ ಕೃಷಿಕರಿಗೆ ಸಹಾಯ ನೀಡಲು ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಸಚಿವರು) :– ಮಾನ್ಯ ಅಧ್ಯಕ್ಷರೇ, ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರ ಪರವಾಗಿ ಈ ಹೇಳಿಕೆಯನ್ನು ನೀಡುತ್ತೇನೆ.

ಭಾರತ ಸರ್ಕಾರ ಹೊರಡಿಸಿರುವ ಸೀಮೆ ಎಣ್ಣೆ (ಉಪಯೋಗದ ನಿಯಂತ್ರಣ) ಆದೇಶ 1966, ಅನ್ವಯ ಅಡಿಗೆ ಅಥವಾ ದೀಪ ಉರಿಸುವುದಕ್ಕೆ ಅಥವಾ ಎರಡು ಉದ್ದೇಶಕ್ಕೆ ಮಾತ್ರ ಸೀಮೆ ಎಣ್ಣೆ ಉಪಯೋಗಿಸುವ ಅವಕಾಶವಿದೆ, ಆದರೆ ವಿಶೇಷ ಸಂದರ್ಭದಲ್ಲಿ ರಾಜ್ಯ ಸರ್ಕಾರ ದತ್ತವಾಗಿರುವ ಅಧಿಕಾರದ ಚೌಕಟ್ಟಿನಲ್ಲಿ ನಿರ್ದಿಷ್ಟ ಷರತ್ತುಗಳ ಅನುಸರಣೆಗೆ ಅನುಗುಣವಾಗಿ, ಬೇರೆ ಉಪಯೋಗಕ್ಕೆ ಅವಕಾಶ ಕಲ್ಪಿಸಬಹುದು. ಈ ಮೇರೆಗೆ (1) 15–09–1965ಕ್ಕೆ ಹಿಂದೆ ಸ್ಥಾಪಿತವಾಗಿ, ಪರ್ಯಾಯ ಮೂಲವಿಲ್ಲದೆ ಸೀಮೆಎಣ್ಣೆ ಬಳಸುತ್ತಿರುವ ಕೈಗಾರಿಕೆಗಳ ಮತ್ತು (2) ಕೃಷಿಕರು ಬಳಸುವ ಕೆಲವು ಮಾದರಿ ಪವರ್ ಟಿಲ್ಲರ್, ಹಾಗೂ ಸಣ್ಣ ನೀರಾವರಿ ಪಂಪುಗಳಿಗೆ, ಸೀಮೆಎಣ್ಣೆ ಉಪಯೋಗಿಸುತ್ತಿದ್ದರೆ, ನಿಗಧಿತ ಅಧಿಕಾರಿಗಳ ಅನುಮತಿಯೊಂದಿಗೆ ಸೀಮೆಎಣ್ಣೆ ಪಡೆಯಲು ಅವಕಾಶವಿದೆ.

ಭಾರತ ಸರ್ಕಾರದವರು ಗೃಹ ಬಳಕೆಗೆ (ಅಡಿಗೆ ಮತ್ತು ದೀಪ ಉರಿಸುವುದಕ್ಕಾಗಿ) ಮತ್ತು ಕೈಗಾರಿಕಾ ಬಳಕೆಗಾಗಿ ಬೇರೆ ಬೇರೆ ದರಗಳನ್ನು ನಿಗಧಿಮಾಡಿರುತ್ತಾರೆ. ಇವುಗಳ ದರ ಪುತ್ತೂರು ತಾಲ್ಲೂಕಿನಲ್ಲಿ ಈ ರೀತಿ ಇವೆ :

1) ಗೃಹ ಬಳಕೆ – 1 ಲೀಟರ್‌ಗೆ ರೂ. 2.77 ಪೈಸೆ

2) ಕೈಗಾರಿಕೆ – 1 ಲೀಟರ್‌ಗೆ ರೂ. 4.42 ಪೈಸೆ

ಗೃಹ ಬಳಕೆಗೆ (ಅಡಿಗೆ ಮತ್ತು ದೀಪ ಉರಿಸುವುದು) ಬಿಟ್ಟು ಬೇರೆ ರೀತಿಯಲ್ಲಿ ಉಪಯೋಗಿಸಿದರೆ ಅದನ್ನು ಕೈಗಾರಿಕೆ ಬಳಕೆಗೆಂದು ಪರಿಗಣಿಸಿ ಕೈಗಾರಿಕೆಗಳಿಗೆ ನಿಗಧಿಪಡಿಸಿದ ದರದಲ್ಲಿ ನೀಡಲಾಗುವುದು. ಭಾರತ ಸರ್ಕಾರದವರು ಈ ದರಗಳನ್ನು ನಿಗಧಿಪಡಿಸುತ್ತಾರೆ.

1990ರ ನವೆಂಬರ್ ಮಾಹೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಆ ಜಿಲ್ಲೆಗೆ ಕೃಷಿ ಬಳಕೆಗಾಗಿ 111 ಕಿ.ಎಲ್. ಸೀಮೆ ಎಣ್ಣೆಯನ್ನು ಹಂಚಿಕೆ ಮಾಡಿರುತ್ತಾರೆ. ಸೀಮೆ ಎಣ್ಣೆಯನ್ನು ಕೃಷಿಕರಿಗೆ ಸಬ್ಸಿಡಿ

ದರದಲ್ಲಿ ವಿತರಿಸುವುದಾದರೆ ದಕ್ಷಿಣ ಕನ್ನಡ ಜಿಲ್ಲೆಯೊಂದಕ್ಕೆ ತಿಂಗಳಿಗೆ 1,83,150 ರೂಪಾಯಿಗಳಂತೆ ವಾರ್ಷಿಕ 21,97,800 ರೂಪಾಯಿಗಳು ಬೇಕಾಗುತ್ತವೆ.

ಕರ್ನಾಟಕದ ಪ್ರತಿ ತಿಂಗಳ ಬೇಡಿಕೆ 66475 ಕೆ.ಎಲ್. ಇದ್ದು, ಅಕ್ಟೋಬರ್ ಅಂತ್ಯದವರೆಗೆ ಕೇಂದ್ರ ಸರ್ಕಾರ ಕೇವಲ 45795 ಕೆ.ಎಲ್. ನೀಡುತ್ತಿತ್ತು. ಪ್ರಸ್ತುತ ಮಾನ್ಯ ಮುಖ್ಯ ಮಂತ್ರಿಗಳು ದಿನಾಂಕ 5–11–90 ರಂದು ಅಂದಿನ ಕೇಂದ್ರದ ಪೆಟ್ರೋಲಿಯಂ ಮತ್ತು ರಾಸಾಯನಿಕ ಖಾತೆಯ ಸಚಿವರಿಗೆ ಆರೆ ಸರ್ಕಾರಿ ಪತ್ರದ ಮೂಲಕ ಹೆಚ್ಚಿನ ಸೀಮೆ ಎಣ್ಣೆ ಸರಬರಾಜಿಗೆ ಒತ್ತಾಯಿಸಿದ್ದರು. ಸಮಸ್ಯೆಯನ್ನು ಪರಿಗಣಿಸಿ ನವೆಂಬರ್ ತಿಂಗಳಿಗೆ 52941 ಕೆ.ಎಲ್. ಸೀಮೆ ಎಣ್ಣೆಯನ್ನು ಒದಗಿಸಿದ್ದಾರೆ. ಇದು ತಾತ್ಕಾಲಿಕವಾಗಿ ಪರಿಸ್ಥಿತಿ ಸುಧಾರಣೆಗೆ ತಕ್ಕಮಟ್ಟಿಗೆ ಸಹಾಯಕವಾಗಿದ್ದು ಇನ್ನುಳಿದ ಬೇಡಿಕೆಗೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಗುವುದು.

ಆದಾಗ್ಯೂ ಜೀವನಾವಶ್ಯಕವಾಗಿರುವ ದೀಪ ಮತ್ತು ಅಡಿಗೆ ಬಳಕೆಗೆ ಬಿಟ್ಟು ಪರ್ಯಾಯ ಮೂಲ ಇರುವ ಪಂಪು ಸೆಟ್‌ಗಳಿಗೆ ಸೀಮೆ ಎಣ್ಣೆ ಪೂರೈಸಲು ಕಠಿಣ ಸಮಸ್ಯೆಯಾಗಿದೆ. ಇಂತಹ ಪರಿಸ್ಥಿತಿಯಲ್ಲಿ ರಿಯಾಯಿತಿ ದರದಲ್ಲಿ ಕೃಷಿ ಪಂಪು ಸೆಟ್‌ಗಳಿಗೆ ಸೀಮೆ ಎಣ್ಣೆ ಕೊಡುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿ ಇಲ್ಲ.

6. ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಸಿಬ್ಬಂದಿ ಕೊರತೆ ಬಗ್ಗೆ:

ಶ್ರೀ ಎಚ್. ಏಕಾಂತಯ್ಯ (ಚಿತ್ರದುರ್ಗ) :– ಮಾನ್ಯ ಅಧ್ಯಕ್ಷರೇ, ನಗರದ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಅರಿವಳಿಕೆ ವೈದ್ಯ ಸಿಬ್ಬಂದಿ ಕೊರತೆಯಿಂದಾಗಿ ಕಳೆದ ಹಲವಾರು ದಿನಗಳಿಂದ ಶ್ವಸ ಚಿಕಿತ್ಸೆಗಳನ್ನು ರದ್ದು ಪಡಿಸಿರುವ ಬಗ್ಗೆ ಇಂದು ಸದನದಲ್ಲಿ ಪ್ರಸ್ತಾಪಿಸಲು ತಮ್ಮ ಅನುಮತಿ ಕೋರುತ್ತೇನೆ.

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಆರೋಗ್ಯ ಸಚಿವರು) :– ಮಾನ್ಯ ಅಧ್ಯಕ್ಷರೇ ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇಲ್ಲಿ ಕೆಲಸ ಮಾಡುತ್ತಿರುವ ಅನೆಸ್ತೇಶಿಯಾ ವೈದ್ಯಾಧಿಕಾರಿಗಳು, ವಿಕ್ಟೋರಿಯಾ ಆಸ್ಪತ್ರೆ, ವಾಣಿವಿಲಾಸ ಆಸ್ಪತ್ರೆ ಮತ್ತು ಅದಕ್ಕೆ ಸಂಬಂಧಿಸಿದ ಮಕ್ಕಳ ಆಸ್ಪತ್ರೆಯನ್ನೂ ಸಹ ನೋಡಿಕೊಳ್ಳಬೇಕಾಗುತ್ತದೆ. ಹೀಗಿದ್ದರೂ ಅನೆಸ್ತೇಶಿಯಾ ವೈದ್ಯಾಧಿಕಾರಿಗಳ ಕೊರತೆಯಿಂದಾಗಿ ಶಸ್ತ್ರ ಚಿಕಿತ್ಸೆಯನ್ನು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಯಾವುದೇ ಕಾರಣದಿಂದ ನಿಲ್ಲಿಸಿರುವುದಿಲ್ಲ. ವಿಕ್ಟೋರಿಯಾ ಆಸ್ಪತ್ರೆಯು ಬೆಂಗಳೂರು ವೈದ್ಯಕೀಯ ಕಾಲೇಜಿನ ಅಧೀನದಲ್ಲಿ ಇದ್ದು, ಅಲ್ಲಿ 6 ಜನ ಅನೆಸ್ತೇಶಿಯಾ ವೈದ್ಯರುಗಳ ಹುದ್ದೆಗಳು ಖಾಲಿ ಇದ್ದು, ಅವರುಗಳಲ್ಲಿ ಒಬ್ಬ ಪ್ರೋಪೆಸರ್ ಮತ್ತು 5 ಜನ ಉಪನ್ಯಾಸಕರ ಹುದ್ದೆಗಳು ಸೇರಿವೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮತ್ತು ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಅನೆಸ್ತೇಶಿಯಾ ವೈದ್ಯಾಧಿಕಾರಿಗಳ ಕೊರತೆ ಇದೆ. ಅಲ್ಲಿಯ ಕೊರತೆಯನ್ನು ಗಮನಿಸಿ, ಸರ್ಕಾರವು ತನ್ನ ಅಧಿಸೂಚನೆ ಸಂಖ್ಯೆ ಆಕುಕ. 823 ಹೆಚ್‌ಎಸ್‌ಹೆಚ್. 90, ದಿನಾಂಕ 29.10.1990ರಲ್ಲಿ ಇಬ್ಬರು ಸಹಾಯಕ ಶಸ್ತ್ರ ಚಿಕಿತ್ಸಕರುಗಳನ್ನು (ಅನೆಸ್ತೇಟಿಸ್ಟ್) ಮಿಂಟೋ ಆಸ್ಪತ್ರೆ, ಬೆಂಗಳೂರು ಇಲ್ಲಿಂದ ಅನ್ಯ ಕರ್ತವ್ಯದ ಮೇರೆಗೆ (ಒ.ಒ.ಡಿ) ವಿಕ್ಟೋರಿಯಾ ಆಸ್ಪತ್ರೆಗೆ ನಿಯೋಜಿಸಿದೆ.

ಉಪನ್ಯಾಸಕ ಹುದ್ದೆಗಳನ್ನು ತುಂಬುವ ಸಲುವಾಗಿ ಸಹಾಯಕ ಶಸ್ತ್ರ ಚಿಕಿತ್ಸಕ ಹುದ್ದೆಗಳಿಂದ ಆಯ್ಕೆ ಮಾಡಲು ಸಂದರ್ಶನವನ್ನು ನಡೆಸಲಾಗಿದೆ. ವಿಕ್ಟೋರಿಯಾ ಆಸ್ಪತ್ರೆಯ ಪರಿಸ್ಥಿತಿಯನ್ನು ನಿಭಾಯಿಸಲು 3 ಜನ ಅನೆಸ್ತೇಶಿಯಾ ವೈದ್ಯಾಧಿಕಾರಿಗಳನ್ನು ನಿಯೋಜನೆಯ ಮೇಲೆ ಆದಷ್ಟು ಶೀಘ್ರವಾಗಿ ಕಳುಹಿಸಲು ಕ್ರಮ ತೆಗೆದುಕೊಳ್ಳಲಾಗುವುದು. ಅಲ್ಲದೆ ಕೆಲವು ವೈದ್ಯಾಧಿಕಾರಿಗಳನ್ನು ಆಯ್ಕೆಮಾಡಿ ಅನೆಸ್ತೇಶಿಯಾ ವಿಷಯದ ಬಗ್ಗೆ ತರಬೇತಿಗೊಳಿಸಲು ಸರ್ಕಾರವು ಪರಿಶೀಲಿಸುತ್ತಿದೆ.

7. ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಕನ್ನಡದಲ್ಲಿ ಪೋಷಣೆಗಳನ್ನು ಪ್ರಕಟಿಸುವಂತೆ ಕ್ರಮ ಕೈಗೊಳ್ಳುವ ಬಗ್ಗೆ :

Shri Derrick M.R. Fullinfaw :- Respected Speaker, Sir. Bangalore Airport authorities have not made arrangements to make announcements in the regional language i.e., Kannada in the airport for the benefit of large number of persons visiting the airport who have no knowledge of English or Hindi. Owing to the lack of knowledge of English